# ಗರ್ಭಧಾರಣೆಗೆ ಅಡ್ಡಿಪಡಿಸುವ ಗರ್ಭಕೋಶದ ಗೆಡ್ಡೆ

**ನವ ವಿವಾಹಿತೆ ತಾಯಿಯಾಗುತ್ತಿದ್ದಾಳೆಂದರೆ ಅದು ಕೇವಲ ಆಕೆಯ ಸಂಭ್ರಮ ಮಾತ್ರವಲ್ಲ ಇಡೀ ಕುಟುಂಬವನ್ನೇ ಸಂಭ್ರಮದ ಸಡಗರದಲ್ಲಿ ತೇಲಿಸುತ್ತದೆ. ಫಲವಂತಿಕೆ ಎನ್ನುವುದು ಸೃಷ್ಟಿಯ ನಿಯಮದಲ್ಲೊಂದು. ಆದರೆ ಕೆಲವೊಮ್ಮೆ ವಿಧಿಯ ಇಚ್ಛೆಯ ಬೇರೆಯಾಗಿರುತ್ತದೆ. ಗರ್ಭಧರಿಸಬೇಕಿದ್ದ ಯುವತಿಯ ಗರ್ಭಕೋಶದಲ್ಲಿ ಗೆಡ್ಡೆಯೊಂದು ಇಂಥ ಸಂಭ್ರಮದ ನಿರೀಕ್ಷೆಯಲ್ಲಿದ್ದವರ ಮೇಲೆ ತಣ್ಣೀರು ಎರಚಬಹುದು. ಆದರೆ ವೈದ್ಯಕೀಯ ಲೋಕದ ಆವಿಷ್ಕಾರಗಳ ಹಾಗೂ ಬೀಮ್ಸ್ ಆಸ್ಪತ್ರೆಯ ವೈದ್ಯರ ಸತತ ಪ್ರಯತ್ನದಿಂದಾಗಿ ಕಳೆದುಹೋದ ನೆಮ್ಮದಿ ಮತ್ತೆ ಮರಳುವ ವಿಶ್ವಾಸ ಮೂಡಿಸಿದೆ .**



ಇತ್ತೀಚೆಗೆ 32 ವರ್ಷದ ಸಾಫ್ಟ್‌ವೇರ್ ಇಂಜಿನೀಯರ್ ಒಬ್ಬರು **ಕೋರಮಂಗಳದ ಬೀಮ್ಸ್ ಆಸ್ಪತ್ರೆಗೆ** ಬಂದಿದ್ದರು. ಮದುವೆಯಾಗಿ ಮೂರು ವರ್ಷವಾಗಿತ್ತು. ಆದರೆ ಮಕ್ಕಳಾಗಿರಲಿಲ್ಲ. ಕಾರಣ ಹುಡುಕುವ ಸಲುವಾಗಿ ನಡೆಸಿದ ಪರೀಕ್ಷೆಯಿಂದ ಗರ್ಭಕೋಶದಲ್ಲಿ ದೊಡ್ಡ ಗಾತ್ರದ ಗೆಡ್ಡೆಯೊಂದು ಇರುವುದು ಪತ್ತೆಯಾಯಿತು. ಧೃತಿಗೆಡದೆ ಅವರು ಸರಳ ಹಾಗೂ ಸುಲಭವಾದ ಉದರದರ್ಶಕ ಶಸ್ತ್ರಚಿಕಿತ್ಸೆಯ ಮೊರೆ ಹೋದರು. ಗೆಡ್ಡೆ ತೆಗೆದ ಒಂದು ವಾರದೊಳಗೆ ಕೆಲಸಕ್ಕೆ ಹಾಜರಾದರು. ಕೇವಲ ಅಷ್ಟು ಮಾತ್ರವಲ್ಲ ಆಕೆ ಈಗ 35 ವಾರಗಳ ಗರ್ಭಿಣಿಯಾಗಿದ್ದು ತಮ್ಮ ಮೊದಲ ಮಗುವಿನ ನಿರೀಕ್ಷೆಯಲ್ಲಿದ್ದಾರೆ. ಇಂತಹ ಮಹಿಳೆಯರಿಗೆ ಶಸ್ತ್ರಚಿಕಿತ್ಸೆ ವರದಾನವಾಗಿದೆ.

ಗರ್ಭಕೋಶದಲ್ಲಿ ಬೆಳೆಯುವ ಕ್ಯಾನ್ಸರ್ ಅಲ್ಲದ ಗೆಡ್ಡೆಯೇ ಗರ್ಭಕೋಶದ ಗೆಡ್ಡೆ ಅಥವಾ ಫೈಬ್ರಾಯ್ಡ್. ಪ್ರೌಢಾವಸ್ಥೆಗೂ ಮುನ್ನ ಹಾಗೂ ಋತುಬಂಧದ ನಂತರ ಗರ್ಭಕೋಶದ ಗೆಡ್ಡೆ ಬೆಳೆಯದು ಎಂಬ ಸಂಗತಿ ನೆನಪಿನಲ್ಲಿಟ್ಟುಕೊಳ್ಳಬೇಕು.

### ಗರ್ಭಕೋಶದ ಗೆಡ್ಡೆ ಹಾಗೂ ಫಲವಂತಿಕೆ

ಗರ್ಭಕೋಶದ ಗೆಡ್ಡೆ ಇರುವ ಯುವತಿಯೊಬ್ಬಳು ಮುಂದೆ ತಾನು ಗರ್ಭ ಧರಿಸಬಹುದೇ ಅಥವಾ ಅದು ಅಸಾಧ್ಯವೇ ಎಂಬ ಅನುಮಾನ ಇರುವುದು ಸಾಮಾನ್ಯ. ಪರಿಣಾಮಕಾರಿ ಫಲವಂತಿಕೆ ಚಿಕಿತ್ಸೆಯ ವಿಫಲತೆಗು ಗರ್ಭಕೋಶದ ಗೆಡ್ಡೆಗೂ ನೇರವಾದ ಸಂಬಂಧವಿದೆ.

ಗರ್ಭಕೋಶದ ಗೆಡ್ಡೆ ಫೆಲೋಪಿಯನ್ ಕೊಳವೆಯನ್ನು ಸಂಕುಚಿತಗೊಳಿಸುವುದರಿಂದ ವೀರ್ಯ ಹಾಗೂ ಅಂಡಾಣುವಿನ ಸರಾಗ ಸಂಚಾರಕ್ಕೆ ಅಡಚಣೆ ಉಂಟಾಗುತ್ತದೆ. ಗರ್ಭಕೋಶದ ಗೆಡ್ಡೆಯು ಭ್ರೂಣದ ಬೆಳವಣಿಗೆಗೆ ಅಗತ್ಯವಿರುವ ರಕ್ತದ ಪರಿಚಲನೆಗೆ ತಡೆಯೊಡ್ಡುತ್ತದೆ. ಗರ್ಭ ಧರಿಸಿದ ನಂತರ ಗರ್ಭಕೋಶದ ಒಳಗೆ ಮೂಡುವ ಸಬ್‌ಮ್ಯುಕೋಸಲ್ ಫೈಬ್ರಾಯ್ಡ್‌ನಿಂದ ರಕ್ತದ ಪರಿಚಲನೆ ಕುಂಠಿತವಾಗಿ ಗರ್ಭಪಾತವಾಗುವ ಸಾಧ್ಯತೆ ಹೆಚ್ಚಿರುತ್ತದೆ.

### ಗರ್ಭಕೋಶದ ಗೆಡ್ಡೆ ಹಾಗೂ ಗರ್ಭಧಾರಣೆ

ಗರ್ಭವ್ಯವಸ್ಥೆಯಲ್ಲಿ ಗರ್ಭಕೋಶದ ಗೆಡ್ಡೆಯ ಬೆಳವಣಿಗೆಯ ಹೆಚ್ಚುತ್ತದೆ ಹಾಗೂ ಹೆರಿಗೆ ನಂತರ ಅದು ಕ್ಷೀಣಿಸುತ್ತದೆ. ಆದರೆ ಗರ್ಭ ಧರಿಸಿದಾಗ ಅದರಿಂದ ಆಗುವ ತೊಂದರೆಗಳೆಂದರೆ:

1. ಅವಧಿಗೆ ಮುನ್ನ ಪ್ರಸವ
2. ಭ್ರೂಣದ ಕುಂಠಿತ ಬೆಳವಣಿಗೆ
3. ಮಗು ಹುಟ್ಟಿದ ನಂತರ ಅತಿಯಾದ ರಕ್ತಸ್ರಾವ
4. ಗೆಡ್ಡೆಯು ಸಾಮಾನ್ಯ ಪ್ರಸವಕ್ಕೆ ಅಡಚಣೆಯಾಗಬಹುದು.
5. ಅವಧಿಗೆ ಮುನ್ನ ಹೆರಿಗೆ ನೋವು ಕಾಣಿಸಿಕೊಂಡು ಪ್ರಸವವಾಗುವ ಸಾಧ್ಯತೆ.

ಈ ಸಮಸ್ಯೆ ಅರಿಯಲು ಅಲ್ಟ್ರಾಸೊನೊಗ್ರಾಫಿ ಹಾಗೂ ವಿಶೇಷ ಸಂದರ್ಭದಲ್ಲಿ ಎಂಆರ್‌ಐ ಬಳಸಬಹುದು.

### ವೈದ್ಯಕೀಯ ಚಿಕಿತ್ಸೆ

ತಾತ್ಕಾಲಿಕ ಉಪಶಮನವಾಗಿ ಔಷಧ ನೀಡಲಾಗುತ್ತದೆ. ಇದನ್ನು ಸಾಮಾನ್ಯವಾಗಿ ಶಸ್ತ್ರಕ್ರಿಯೆಯಿಂದ ಗೆಡ್ಡೆ ತೆಗೆಯುವ ಮುನ್ನ ನೀಡಿ ಇರುವ ಅನೀಮಿಯಾ ಉತ್ತಮಪಡಿಸುವುದು ಇದರ ಉದ್ದೇಶ. ಔಷಧ ಸೇವನೆ ಸ್ಥಗಿತಗೊಳಿಸಿದಲ್ಲಿ ಗೆಡ್ಡೆಯ ಬೆಳವಣಿಗೆ ಮತ್ತೆ ಹೆಚ್ಚಾಗುತ್ತದೆ.

### ಶಸ್ತ್ರಕ್ರಿಯೆ ಮೂಲಕ

ಗರ್ಭಧರಿಸದ ಮಹಿಳೆಯು ತನ್ನ ಗರ್ಭಕೋಶವನ್ನು ತನ್ನ ಒಡಲಲ್ಲೇ ಉಳಿಸಿಕೊಳ್ಳಲು ನಿರ್ಧರಿಸಿದರೆ ಗರ್ಭಕೋಶದ ಗೆಡ್ಡೆಯನ್ನು ಮಿಯೊಮೆಕ್ಟಮಿ ಶಸ್ತ್ರಚಿಕಿತ್ಸೆಯ ಮೂಲಕ ತೆಗೆಯಲಾಗುತ್ತದೆ. ಇದನ್ನು.

**ಅಬ್ಡಾಮಿನಲ್ ಮಿಯೋಮೆಕ್ಟಮಿ:** ಗರ್ಭಕೋಶ ಕಾಣುವವರೆಗೂ ಕೆಳಹೊಟ್ಟೆಯನ್ನು ದೊಡ್ಡದಾಗಿ ಕತ್ತರಿಸಲಾಗುತ್ತದೆ. ಗರ್ಭಕೋಶದ ಮಾಂಸಖಂಡಗಳಲ್ಲಿ ಇರುವ ಗೆಡ್ಡೆಯನ್ನು ತೆಗೆಯಲಾಗುತ್ತದೆ.

**ಲ್ಯಾಪ್ರೋಸ್ಕೋಪಿಕ್ ಮಿಯೋಮೆಕ್ಟಮಿ:** ಕೆಳಹೊಟ್ಟೆಯಲ್ಲೊಂದು ಸಣ್ಣದೊಂದು ರಂಧ್ರದ ಮೂಲಕ ನಡೆಸುವ ಶಸ್ತ್ರಚಿಕಿತ್ಸೆಯಿಂದ ಕಡಿಮೆ ಗಾಯ ಹಾಗೂ ಬಹುಬೇಗ ಗುಣಮುಖರಾಗಬಹುದಾಗಿದೆ.

**ಹಿಸ್ಟರೊಸ್ಕೋಪಿಕ್ ಮಿಯೋಮೆಕ್ಟಮಿ:**
ಫೈಬರ್‌ಆಪ್ಟಿಕ್ ದೂರದರ್ಶಕವನ್ನು ಯೋನಿ ಮೂಲಕ ಗರ್ಭಕೋಶದ ಒಳಗೆ ಕಳುಹಿಸಿ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ. ಗರ್ಭಕೋಶದ ಒಳಪದರದ ಸಬ್‌ಮ್ಯುಕೊಸಲ್ ಫೈಬ್ರಾಯ್ಡ್ ಗೆಡ್ಡೆಯನ್ನು ತೆಗೆಯಲು ಮಾತ್ರ ಈ ಬಗೆಯ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ.

ಶಸ್ತ್ರಚಿಕಿತ್ಸೆಯಾದ ಆರು ತಿಂಗಳ ನಂತರ ರೋಗಿಯು ಗರ್ಭಧರಿಸಲು ಸಿದ್ಧರಾಗುತ್ತರೆ.



**ಡಾ. ಶಾಂತಲಾ ತುಪ್ಪಣ್ಣ**
ಸ್ತ್ರೀರೋಗ ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸಕಿ
**ದೂ: 93429 03045 / 080–39417700**

ಬೀಮ್ಸ್ ಆಸ್ಪತ್ರೆ
beams™ hospital
laparoscopic surgery centre

# 640, 12ನೇ ಮುಖ್ಯ ರಸ್ತೆ, 80ಅಡಿ ರಸ್ತೆ, 4ನೇ ಹಂತ,
ಕೋರಮಂಗಲ, ಬೆಂಗಳೂರು–560 034
www.beamshospitals.com,
mail us :- customercare@beamshospitals.com